### ಧಾರವಾಡದಲ್ಲಿ ಐಐಟಿ ಕ್ಯಾಂಪಸ್ ಉದ್ಘಾಟನೆ

# ಝಳಿಸಿದ ಪ್ರಧಾನಿ ಮೋದಿ

## ಲಂಡನ್‌ನಲ್ಲಿ ಅನುಭವ ಮಂಟಪಕ್ಕೆ ಅವಮಾನ

■ ವಿಕ ಸುದ್ದಿಲೋಕ ಧಾರವಾಡ

ವಿಶ್ವಕ್ಕೆ ಪ್ರಜಾಪ್ರಭುತ್ವ ಪರಿಕಲ್ಪನೆಯನ್ನಿತ್ತ ಭಾರತ. ಇದು ಕರ್ನಾಟಕದ ಬಸವಣ್ಣನವರ ಕೊಡುಗೆ. ಆದರೆ, ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಯನ್ನೇ ಅವಮಾನಿಸುವ ಘಟನೆ ಇತ್ತೀಚೆಗೆ ಲಂಡನ್‌ನಲ್ಲಿ ನಡೆದಿದ್ದು, ಇದು ಬಸವಣ್ಣ ಹಾಗೂ ಬಸವ ತತ್ವಕ್ಕೆ ಮಾಡಿದ ದೊಡ್ಡ ಅವಮಾನ ಎಂದು ಪ್ರಧಾನಿ ನರೇಂದ್ರ ಮೋದಿ ಪರೋಕ್ಷವಾಗಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ವಿರುದ್ಧ ವಾಗ್ದಾಳಿ ನಡೆಸಿದರು.

ಧಾರವಾಡದಲ್ಲಿ ಭಾನುವಾರ ಐಐಟಿ ಕ್ಯಾಂಪಸ್ ಲೋಕಾರ್ಪಣೆಗೊಳಿಸಿ ಮಾತನಾಡಿದ ಅವರು, ತಮ್ಮ ಭಾಷಣದಲ್ಲಿ ಎಲ್ಲಿಯೂ ರಾಹುಲ್ ಗಾಂಧಿ ಹೆಸರು ಪ್ರಸ್ತಾಪಿಸದೇ 'ಕೆಲವರು' ಎಂಬ ಶಬ್ದ ಬಳಸಿ, ಪರೋಕ್ಷವಾಗಿ ಚಾಟಿ ಬೀಸಿ 'ಪ್ರಜಾಪ್ರಭುತ್ವದ ತಾಯಿ ಭಾರತ' ಎಂದು ಉದ್ಗರಿಸಿದರು.

''12ನೇ ಶತಮಾನದಲ್ಲಿಯೇ ಅನುಭವ ಮಂಟಪ ಸ್ಥಾಪಿಸಿದ ಬಸವಣ್ಣನವರು ಪ್ರಜಾಪ್ರಭುತ್ವ ವ್ಯವಸ್ಥೆಗೆ ಮುನ್ನುಡಿ ಬರೆದರು. ಹೀಗಾಗಿ, ನನಗೆ ಲಂಡನ್‌ನಲ್ಲಿ ಬಸವೇಶ್ವರ ಪುತ್ಥಳಿ ಅನಾವರಣಗೊಳಿಸುವ ಸೌಭಾಗ್ಯ ಸಿಕ್ಕಿತು. ಆದರೆ, ಕೆಲವರು ಅದೇ ಲಂಡನ್‌ನಲ್ಲಿ ಭಾರತದ ಲೋಕತಂತ್ರ ಅವಮಾನಿಸುವ ರೀತಿಯಲ್ಲಿ ಮಾತನಾಡಿರುವುದು ನಮ್ಮ ದೌರ್ಭಾಗ್ಯ. ಇದು ಭಾರತೀಯ ಪರಂಪರೆ ಮಾತ್ರವಲ್ಲ ಭಾರತೀಯರಿಗೆ ಮಾಡಿದ ಅವಮಾನ. ಹೀಗಾಗಿ, ಇಂತಹವರಿಂದ ಕನ್ನಡಿಗರು ಸ್ವಲ್ಪ ಅಂತರ ಕಾಯ್ದುಕೊಳ್ಳಬೇಕು,'' ಎಂದರು.

**ಕನ್ನಡಿಗರ ಋಣ ತೀರಿಸುವೆ:** ತಮ್ಮ ಭಾಷಣದಲ್ಲಿ ಕರ್ನಾಟಕವನ್ನು ಕೊಂಡಾಡಿದ ಮೋದಿ, ''ಕನ್ನಡಿಗರು ಸ್ನೇಹಜೀವಿಗಳು. ಕಲಬುರಗಿ- ಶಿವಮೊಗ್ಗ, ಮೈಸೂರು- ತುಮಕೂರು, ಬೆಳಗಾವಿ- ಬೆಂಗಳೂರು ಹೀಗೆ ನಾನು ಎಲ್ಲೇ ಹೋದರೂ, ಯಾವುದೇ ರೋಡ್ ಶೋ ನಡೆಸಿದಾಗಲೂ ಕರ್ನಾಟಕ, ಕನ್ನಡಿಗರು ತೋರಿದ ಪ್ರೀತಿ, ಆಶೀರ್ವಾದವನ್ನು ಮರೆಯಲಾರೆ. ಹೇಗಾದರೂ ಮಾಡಿ ಕನ್ನಡಿಗರ ಈ ಋಣ ತೀರಿಸುತ್ತೇನೆ'' ಎಂದು ಭರವಸೆ ನೀಡಿದರು.

**ಶಂಕುಸ್ಥಾಪನೆ, ಲೋಕಾರ್ಪಣೆ ಬದ್ಧತೆ:** ''ಶಿಕ್ಷಣ ಸಂಸ್ಥೆ ಆರಂಭಿಸಿದಷ್ಟೂ ಉತ್ತಮ ಶಿಕ್ಷಣ ದೊರಕಲು ಸಾಧ್ಯ. ಆದ್ದರಿಂದ ಉತ್ತಮ ಶಿಕ್ಷಣ ಸಂಸ್ಥೆ ಸ್ಥಾಪನೆಗೆ ಸರಕಾರ ಆದ್ಯತೆ ನೀಡಿದೆ. ಶಂಕುಸ್ಥಾಪನೆ ನೆರವೇರಿಸಿ ಮರೆತುಬಿಡುವ ಕಾಲ ಹೋಯಿತು. ನಾವೇ ಶಂಕುಸ್ಥಾಪನೆ ನೆರವೇರಿಸಿ ನಾವೇ ಲೋಕಾರ್ಪಣೆ ಮಾಡುವುದು ನಮ್ಮ ಬದ್ಧತೆ. ದೇಶದಲ್ಲಿ 70 ವರ್ಷದ ಅವಧಿಗೆ 380 ವೈದ್ಯಕೀಯ ಕಾಲೇಜುಗಳಿದ್ದವು. ಈ 9 ವರ್ಷಗಳಲ್ಲಿ ನಾವು 250 ಕಾಲೇಜು ಸ್ಥಾಪಿಸಿದ್ದೇವೆ. ಆಧುನಿಕ ತಂತ್ರಜ್ಞಾನ ಮೂಲಕ ಭಾರತ ವಿಕಸನಗೊಂಡಿದೆ,'' ಎಂದು ಕೇಂದ್ರ ಸರಕಾರದ ಸಾಧನೆ ಪಟ್ಟಿ ತೆರೆದಿಟ್ಟರು.

ಸಿಎಂ ಬೊಮ್ಮಾಯಿ, ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ, ಮಾಜಿ ಸಿಎಂ ಜಗದೀಶ್ ಶೆಟ್ಟರ್, ಸಚಿವರಾದ ಗೋವಿಂದ ಕಾರಜೋಳ, ಸಿ.ಸಿ.ಪಾಟೀಲ, ವಿ.ಸೋಮಣ್ಣ, ಬಿ.ಎ.ಬಸವರಾಜ, ಶಂಕರ ಪಾಟೀಲ ಮುನೇನಕೊಪ್ಪ, ಶಾಸಕರಾದ ಸಿ.ಎಂ.ನಿಂಬಣ್ಣವರ, ಅರವಿಂದ ಬೆಲ್ಲದ, ಅಮೃತ ದೇಸಾಯಿ ಇದ್ದರು.

**ರಾಹುಲ್ ಗಾಂಧಿ ವಿರುದ್ಧ ಪರೋಕ್ಷ ವಾಗ್ದಾಳಿ**



ಪ್ರಧಾನಿ ಮೋದಿ ಅವರಿಗೆ ಕಲಘಟಗಿ ತೊಟ್ಟಿಲು ಉಡುಗೊರೆ ನೀಡಲಾಯಿತು.

### ಕಲಘಟಗಿ ತೊಟ್ಟಿಲು ನೀಡಿ ಗೌರವ

ಪ್ರಧಾನಿಗೆ ಕಲಘಟಗಿ ತೊಟ್ಟಿಲು, ಹಾವೇರಿಯ ಏಲಕ್ಕಿ ಹಾರ, ಏಲಕ್ಕಿ ಪೇಟ, ಧಾರವಾಡ ಕಸೂತಿ ಶಾಲು, ಸಿದ್ಧಾರೂಢರ ಮೂರ್ತಿ ಹಾಗೂ ಧಾರವಾಡ ಪೇಡಾ ನೀಡಿ ಗೌರವಿಸಲಾಯಿತು.